# ಟೈಗರ್–ಕೃತಿ ಸಾಹಸ ಚಿತ್ರಕೃತಿ




ಟೈಗರ್ ಶ್ರಾಫ್ ಚಿಣ್ಣರಿಗೆ ಮೆಚ್ಚು. ಲಾಗ ಹಾಕುವುದರಲ್ಲಿ ಅವರು ನಿಸ್ಸೀಮ. ನೃತ್ಯ ಲಾಲಿತ್ಯದಲ್ಲೂ ಎತ್ತಿದಕೈ. ಸಾಹಸ ದೃಶ್ಯಗಳಿಗೆ ತಕ್ಕಂತೆ ದೇಹಾಕಾರವನ್ನೂ ಕಾಪಾಡಿಕೊಂಡಿದ್ದಾರೆ. ಅಂಗಿ ತೆಗೆದರೆ ಇಣುಕುವ ಸಿಕ್ಸ್‌ಪ್ಯಾಕ್ ಎಷ್ಟೋ ಜಿಮ್‌ಗಳ ಗೋಡೆಗಳನ್ನು ಅಲಂಕರಿಸುವಷ್ಟು ಪ್ರಭಾವಿ. ಇಷ್ಟೆಲ್ಲ ಇದ್ದರೂ ಅವರಿಗೆ ನಟನಾಗಿ ದೊಡ್ಡಮಟ್ಟದ ಛಾಪು ಮೂಡಿಸಲು ಸಾಧ್ಯವಾಗಿಲ್ಲ. ಅದೇ ಕಾರಣಕ್ಕೋ ಏನೋ ಅವರೀಗ ನಿರ್ದೇಶಕ ವಿಕಾಸ್ ಬೆಹ್ಲ್ ಅವರ ಸಾಣೆಗೆ ಒಳಪಟ್ಟಿದ್ದಾರೆ. ‘ಗಣಪತ್–1’ ಸಿನಿಮಾ ಚಿತ್ರೀಕರಣದ ಒಂದು ಹಂತ ಯುನೈಟೆಡ್ ಕಿಂಗ್‌ಡಮ್‌ನಲ್ಲಿ ಮುಗಿದಿದೆ. ಇನ್ನೊಂದು ಹಂತಕ್ಕೆ ಮುಂಬೈನಲ್ಲಿ ಸೆಟ್ ಸಿದ್ಧವಾಗುತ್ತಿದೆ.

‘ಹೀರೋಪಂತಿ’ ಸಿನಿಮಾದಲ್ಲಿ ಟೈಗರ್ ಶ್ರಾಫ್ ಹಾಗೂ ಕೃತಿ ಸನೋನ್ ಜೋಡಿ ಮೋಡಿ ಮಾಡಿತ್ತು. ಅದೇ ಜೋಡಿಯನ್ನು ನಿರ್ದೇಶಕ ವಿಕಾಸ್ ಬೆಹ್ಲ್ ಕೂಡ ನೆಚ್ಚಿಕೊಂಡಿದ್ದಾರೆ. ‘ನನ್ನ ದೇಹ ಕಂಡವರು ಅಥ್ಲೀಟ್ ತರಹ ಬಾಗಿ ಬಳುಕಬಲ್ಲೆ ಎಂದು ಭಾವಿಸುತ್ತಾರೆ. ಪರಿಸ್ಥಿತಿ ಹಾಗಿಲ್ಲ. ಸಾಹಸ ಪ್ರಧಾನ ಸಿನಿಮಾಗಳಲ್ಲಿ ನಟಿಸುವಾಗ ದೇಹವನ್ನು ಸಾಕಷ್ಟು ದಣಿಯಲು ಬಿಡಬೇಕು. ಅದಕ್ಕೆ ಮಾಡಿಕೊಂಡ ಸಿದ್ಧತೆ ಅಷ್ಟಿಷ್ಟಲ್ಲ. ನನಗೂ ಸಾಹಸ ದೃಶ್ಯಗಳಿರುವ ಚಿತ್ರದಲ್ಲಿ ಮಿಂಚಬೇಕು ಎಂಬ ಬಯಕೆ ಇತ್ತು. ಅದು ಈ ಸಿನಿಮಾ ಮೂಲಕ ಈಡೇರಬಹುದೆಂಬ ನಿರೀಕ್ಷೆಯಿದೆ’ ಎಂದು ಕೃತಿ ಸನೋನ್ ಸಂತೋಷ ಹಂಚಿಕೊಂಡರು.

ದಸರಾ ಹೊತ್ತಿಗೆ ಸಿನಿಮಾ ತೆರೆಕಾಣಿಸಬೇಕು ಎನ್ನುವುದು ನಿರ್ದೇಶಕ ವಿಕಾಸ್ ಬೆಹ್ಲ್ ಮಾಡಿಕೊಂಡಿರುವ ಒಪ್ಪಂದ. ಅದಕ್ಕೆ ತಕ್ಕಂತೆ ಪ್ರತಿ ಹಂತದ ಚಿತ್ರೀಕರಣ ಮುಗಿದ ಮೇಲೆ ಪೋಸ್ಟ್ ಪ್ರೊಡಕ್ಷನ್ ಕೆಲಸಗಳೂ ನಡೆಯುತ್ತಿವೆ.

‘ಕ್ವೀನ್’ ಸಿನಿಮಾದಿಂದ ಸ್ವತಂತ್ರ ನಿರ್ದೇಶಕರಾದ ವಿಕಾಸ್, ‘ಶಾಂದಾರ್’ ತರಹದ ಡೆಸ್ಟಿನೇಷನ್ ಮ್ಯಾರೇಜ್ ವಸ್ತುವಿನ ಸಿನಿಮಾ ಪ್ರಯೋಗಕ್ಕೆ ಕೈಹಾಕಿದವರು. ‘ಉಡ್ತಾ ಪಂಜಾಬ್’ನ ನಿರ್ಮಾಪಕ. ಅದಲ್ಲದೆ ‘ಸೂಪರ್ 30’ ಚಿತ್ರವನ್ನು ನಿರ್ದೇಶಿಸಿ, ಯಶಸ್ಸನ್ನು ದಕ್ಕಿಸಿಕೊಟ್ಟಿದ್ದರು. ವಸ್ತುವೈವಿಧ್ಯದ ದೃಷ್ಟಿಯಿಂದ ವಿಕಾಸ್ ಗುರುತಾಗಿದ್ದು, ಈ ಸಿನಿಮಾ ಮೇಲೆ ನಿರೀಕ್ಷೆಯ ಭಾರವಿದೆ. ■



# ಶ್ರೀಲೀಲಾ ಅಲೆಯಲ್ಲಿ ಹಿಂದೆ ಸರಿದರಾ ಪೂಜಾ?

ಏಳು ವರ್ಷಗಳ ಹಿಂದೆ ‘ತೇರಿ’ ತಮಿಳು ಸಿನಿಮಾ ತೆರೆಕಂಡು, ಭರ್ಜರಿ ಯಶಸ್ಸು ಸಾಧಿಸಿತ್ತು. ಅಟ್ಲೆ ನಿರ್ದೇಶನದ ಆ ಸಿನಿಮಾದಲ್ಲಿ ವಿಜಯ್ ಅಭಿನಯಕ್ಕೆ ಜನಮೆಚ್ಚುಗೆ ವ್ಯಕ್ತವಾಗಿತ್ತು. ಈಗ ಅದೇ ಸಿನಿಮಾ ತೆಲುಗಿನಲ್ಲಿ ‘ಉಸ್ತಾದ್ ಭಗತ್‌ಸಿಂಗ್’ ಹೆಸರಿನಲ್ಲಿ ರೀಮೇಕ್ ಆಗುತ್ತಿದೆ. ಹರೀಶ್ ಶಂಕರ್ ಅದನ್ನು ನಿರ್ದೇಶಿಸುತ್ತಿದ್ದು, ಪವನ್ ಕಲ್ಯಾಣ್ ನಾಯಕನಾಗಿ ಅಭಿನಯಿಸುತ್ತಿದ್ದಾರೆ. ನಾಯಕಿಯಾಗಿ ಪೂಜಾ ಹೆಗಡೆ ಹೆಸರು ಮೊದಲು ಕೇಳಿಬಂದಿತ್ತು. ಅವರು ಡೇಟ್ಸ್ ಹೊಂದಿಸಲಾಗದೆ ಈ ಅವಕಾಶಕ್ಕೆ ಬೆನ್ನುಮಾಡಿದ್ದಾರೆನ್ನುವ ಸುದ್ದಿ ಹರಿದಾಡುತ್ತಿದೆ. ಆದರೆ, ಚಿತ್ರತಂಡದವರು ಇದನ್ನು ಒಪ್ಪುತ್ತಿಲ್ಲ. ಸಿನಿಮಾದಲ್ಲಿ ಇಬ್ಬರು ನಾಯಕಿಯರಿದ್ದು, ಒಂದು ಪಾತ್ರವನ್ನು ಪೂಜಾ ಮಾಡಲಿದ್ದಾರೆ ಎಂದೇ ಹೇಳುತ್ತಿದ್ದಾರೆ. ಸದ್ಯಕ್ಕೆ ಹೆಚ್ಚು ಚಾಲ್ತಿಯಲ್ಲಿರುವ ಶ್ರೀಲೀಲಾ ಈ ಸಿನಿಮಾದ ಒಬ್ಬ ನಾಯಕಿಯಾಗಿ ಅಭಿನಯಿಸಲು ನಿಕ್ಕಿಯಾಗಿದ್ದಾರೆ.

ಪೂಜಾ ಹೆಗಡೆ ಮೊದಲಿನಷ್ಟು ಸಿನಿಮಾಗಳಲ್ಲಿ ಈಗ ನಟಿಸುತ್ತಿಲ್ಲ. ಅವರನ್ನು ಹುಡುಕಿಕೊಂಡು ಬರುತ್ತಿರುವ ಅವಕಾಶಗಳ ಸಂಖ್ಯೆಯಲ್ಲೂ ಇಳಿಮುಖವಾಗಿರುವ ಮಾತಿದೆ. ಸದ್ಯಕ್ಕೆ ಅವರು ಮಹೇಶ್ ಬಾಬು ನಾಯಕರಾಗಿರುವ ‘ಗುಂಟೂರು ಕಾರಂ’ ಸಿನಿಮಾದಲ್ಲಿ ನಾಯಕಿಯಾಗಿ ಅಭಿನಯಿಸಿದ್ದು, ಈ ಮಸಾಲ ಸಿನಿಮಾ ಯಶಸ್ವಿಯಾದರೆ ಮತ್ತೆ ಪೂಜಾಗೆ ಸುವರ್ಣಕಾಲ ಬರಲಿದೆ ಎನ್ನುವ ಲೆಕ್ಕಾಚಾರವಿದೆ. ತ್ರಿವಿಕ್ರಮ್ ಶ್ರೀನಿವಾಸ್ ನಿರ್ದೇಶನ ಇರುವ ಸಿನಿಮಾ ಇದಾಗಿರುವುದರಿಂದ, ಸಹಜವಾಗಿಯೇ ಯಶಸ್ಸಿನ ನಿರೀಕ್ಷೆ ಖುದ್ದು ಪೂಜಾ ಹೆಗಡೆ ಅವರಿಗೆ ಇದೆ.

‘ಉಸ್ತಾದ್ ಭಗತ್‌ಸಿಂಗ್’ ಸಿನಿಮಾವನ್ನು ಯಥಾವತ್ ‘ತೇರಿ’ ತಮಿಳು ಚಿತ್ರದಂತೆ ಮಾಡದೆ, ಸಾಕಷ್ಟು ಮಾರ್ಪಾಟು ಮಾಡಿಕೊಂಡಿರುವುದಾಗಿ ನಿರ್ದೇಶಕ ಹರೀಶ್ ಶಂಕರ್ ಹೇಳಿದ್ದಾರೆ. ಈಗಲೂ ಅವರು ಪೂಜಾ ಹೆಗಡೆ ಸಿನಿಮಾದಿಂದ ಹೊರಗುಳಿದಿದ್ದಾರೆ ಎಂದು ಅವರು ಸ್ಪಷ್ಟಪಡಿಸಿಲ್ಲ. ■